## ಒಂದನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ

**ಸಿ.ಸಿ. ನಂ.824/2025**

| | | |
|---|---|---|
| ಸಾಕ್ಷಿದಾರರ ಹೆಸರು | ಪ್ರಭಾಕರ | ಸಿ.ಡಬ್ಲ್ಯು–2 |
| ತಂದೆಯ ಹೆಸರು | ಸಿದ್ಧಿ ಹುಚ್ಚೆಗೌಡ | ಪಿ .ಡಬ್ಲ್ಯೂ–1 |
| ವಯಸ್ಸು | 55 ವರ್ಷ | ಪ್ರಮಾಣೀಕರಿಸಿದ |
| ಉದ್ಯೋಗ | ಕೂಲಿ ಕೆಲಸ | ದಿನಾಂಕಃ |
| ವಾಸಃ | ಸಂಪೆಕೈ, ಹೆಗ್ಗೋಡು. | 17.08.2026 |

**ಮುಖ್ಯ ವಿಚಾರಣೆಃ ಸಸಅ ರವರಿಂದಃ**

**1.** ಚಾ.ಸಾ 1, 3 ಮತ್ತು 4 ಗೊತ್ತು. ಮೃತ ಸಂತೋಷ್ ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತನು ನನ್ನ ಅಣ್ಣನ ಮಗ.

**2.** ಸುಮಾರು 1 ವರ್ಷದ ಹಿಂದೆ ನಾನು, ನನ್ನ ಹೆಂಡತಿ, ನನ್ನ ನಾದಿನಿ ಮತ್ತು ಆರೋಪಿತನು ನಮ್ಮ ಅಣ್ಣನ ಕಾರಿನಲ್ಲಿ ಸಿದ್ದಾಪುರಕ್ಕೆ ಹೋಗಿ ವಾಪಸ್ಸು ಸಾಗರಕ್ಕೆ ಬರುತ್ತಿದ್ದೆವು. ಸಾಗರ ತಾಲ್ಲೂಕಿನ ಸಿರಿವಂತೆ ಹತ್ತಿರ ಬರುತ್ತಿದ್ದಾಗ ನಾನು ನಿದ್ರೆಗೆ ಜಾರಿದ್ದೆ. ಆ ಸಂದರ್ಭದಲ್ಲಿ ನಾವು ಬರುತ್ತಿದ್ದ ಕಾರು ಅಪಘಾತವಾಗಿತ್ತು. ಆ ಅಪಘಾತದಲ್ಲಿ ಸೀಟಿನ ಬೆಲ್ಟ್ ನನ್ನ ಹಣೆಗೆ ತಾಗಿ ಗಾಯವಾಗಿತ್ತು. ನಮ್ಮ ಕಾರು ಎದುರಿಗೆ ಬರುತ್ತಿದ್ದ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಪಡಿಸಿ ಅಪಘಾತವಾಗಿತ್ತು. ಆ ದ್ವಿಚಕ್ರ ವಾಹನ ಯಾರಿಗೆ ಸೇರಿದ್ದು ಮತ್ತು ಅದರ ಚಾಲಕನು ಯಾರು ಎಂದು ನನಗೆ ಗೊತ್ತಿಲ್ಲ. ನಂತರ ನನ್ನನ್ನು ಸಾಗರದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಅಪಘಾತ ಹೇಗೆ ಮತ್ತು ಯಾರ ತಪ್ಪಿನಿಂದ ಆಯಿತು ಎಂದು ನನಗೆ ಗೊತ್ತಿಲ್ಲ. ರಾತ್ರಿ 10.00 ಗಂಟೆ ಸುಮಾರಿಗೆ ಅಪಘಾತವಾಗಿರುತ್ತದೆ. ಅಪಘಾತದ ಬಗ್ಗೆ ನನ್ನನ್ನು ವಿಚಾರಣೆ ಮಾಡಿಲ್ಲ.

(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

**3.** ದಿನಾಂಕ 08.02.2025 ರಂದು ನಮ್ಮ ಅಣ್ಣನ ಮಗನ ಕೆಎ–03/ಎಂಜೆ–3552 ರ ಆಲ್ಟೋ ಕಾರಿನಲ್ಲಿ ನಾನು ಮತ್ತು ಆರೋಪಿತನು ಹಾಗೂ ನಮ್ಮ ಸಂಬಂಧಿಕರು ಸಿದ್ಧಾಪುರಕ್ಕೆ ನಮ್ಮ ಅತ್ತೆ ಮೃತ ಪಟ್ಟಿದ್ದರಿಂದ ಹೋಗಿ ವಾಪಸ್ಸು ಬರುತ್ತಿದ್ದೆವು ಎಂದರೆ ಸರಿ. ರಾತ್ರಿ 10.15 ಗಂಟೆ ಸುಮಾರಿಗೆ ಸಾಗರ ತಾಲ್ಲೂಕು ಗ್ರಾಮಾಂತರ ಪೋಲಿಸ್ ಠಾಣಾ ವ್ಯಾಪ್ತಿಯ ಸಿರಿವಂತೆ ಗ್ರಾಮದ ಚಿತ್ರಸಿರಿ ಹತ್ತಿರದ ಮಾದೇವ ಶೆಟ್ಟರವರ ಜಾಗದ ಮುಂದೆ ಸಾಗರ–ಹೊನ್ನಾವರ ಎನ್ ಹೆಚ್–69 ರ ಟಾರ್ ರಸ್ತೆಯಲ್ಲಿ ಚಾ.ಸಾ 1 ರವರ ತಮ್ಮ ಸಂತೋಷ ರಾಮಚಂದ್ರ ನಾಯ್ಕರವರು ಚಾ.ಸಾ 13 ರವರ ಮಾಲೀಕತ್ವದ ಕೆಎ–15/ಇಹೆಚ್–4215 ರ ಸುಜುಕಿ ಆಕ್ಸಿಸ್ ಬೈಕಿನಲ್ಲಿ ಸಾಗರದಿಂದ ಬರುತ್ತಿದ್ದರು ಎಂದರೆ, ನಾನು ಗಮನಿಸಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತನು ನಾವು ಕುಳಿತಿದ್ದ ಕಾರನ್ನು ಅತೀ ವೇಗ ಅಜಾಗರೂಕತೆಯಿಂದ ಚಾಲನೆ ಮಾಡಿ ತನ್ನ ಮುಂದೆ ಬರುತ್ತಿದ್ದ ವಾಹನವನ್ನು ಓವರ್ ಟೇಕ್ ಮಾಡಿಕೊಂಡು ರಸ್ತೆಯ ಬಲಭಾಗಕ್ಕೆ ಬಂದು ಸಂತೋಷ ರಾಮಚಂದ್ರ ನಾಯ್ಕರವರ ಸ್ಕೂಟಿಗೆ ಡಿಕ್ಕಿ ಪಡಿಸಿದರು ಎಂದರೆ ಸರಿಯಲ್ಲ. ಮುಂದುವರೆದು ಆರೋಪಿತನು ಕಾರನ್ನು ನಿಧಾನವಾಗಿಯೇ ಓಡಿಸಿಕೊಂಡು ಹೊಗುತ್ತಿದ್ದನು ಎನ್ನುತ್ತಾರೆ. ಆರೋಪಿತನು ಡಿಕ್ಕಿ ಹೊಡಿಸಿದ ಪರಿಣಾಮವಾಗಿ ಎದುರಿಗೆ ಬರುತ್ತಿದ್ದ ಸಂತೋಷ ರಾಮಚಂದ್ರ ನಾಯ್ಕರವರು ಸ್ಕೂಟಿಯಿಂದ ಹಾರಿ ರಸ್ತೆಯ ಮೇಲೆ ಬಿದ್ದು ತಲೆ, ಎದೆ, ಹೊಟ್ಟೆ ಮತ್ತು ಮರ್ಮಾಂಗಕ್ಕೆ ಪೆಟ್ಟು ಬಿದ್ದು ಪ್ರಜ್ಞಾಹೀನಾ ಸ್ಥಿತಿಯಲ್ಲಿ ಇದ್ದನು ಎಂದರೆ ಸರಿ. ನಂತರ ಚಾ.ಸಾ 3 ಮತ್ತು 4 ರವರು ಮೃತ ಸಂತೋಷ ರಾಮಚಂದ್ರ ನಾಯ್ಕರವರನ್ನು ಸಾಗರದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ವೈದ್ಯರು ಪರೀಕ್ಷಿಸಿ ಅವನು ಮೃತ ಪಟ್ಟಿದ್ದಾನೆ ಎಂದು ತಿಳಿಸಿದರು ಎಂದರೆ ಸರಿ. ನನಗೂ ಸಹ ತಲೆ, ಕೈ ಕಾಲಿಗೆ ಪೆಟ್ಟು ಬಿದ್ದಿತ್ತು ಎಂದರೆ ಸರಿಯಲ್ಲ. ಮುಂದುವರೆದು ತಲೆಗೆ ಮಾತ್ರ ಗಾಯ ಬಿದ್ದಿತ್ತು ಎನ್ನುತ್ತಾರೆ.

**4.** ಘಟನೆಯ ಕುರಿತು ಈಗ ಓದಿ ಹೇಳಿದಂತೆ ಪೋಲಿಸರ ಮುಂದೆ ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ತನ್ನ ಹೇಳಿಕೆಗೆ ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ, ಸದರಿ ಹೇಳಿಕೆಯನ್ನು ನಿಪಿ–1 ಎಂದು ಗುರುತಿಸಲಾಯಿತು. ಆರೋಪಿತನು ನನ್ನ ಅಣ್ಣನ ಮಗನಾಗಿರುವುದರಿಂದ ಘಟನೆಯ ಕುರಿತು ಎಲ್ಲಾ ಮಾಹಿತಿ ತಿಳಿದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ  ಆರೋಪಿತನ ಪರ ವಕೀಲರಾದ ಶ್ರೀ. ಎನ್.ಜಿ.ಕೆ ವಕೀಲರಿಂದಃ–</u>**

ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

**<u>ಮರುವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

C/c ಒಂದನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು, ಸಾಗರ.